**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಮುಳಬಾಗಿಲು**

**ಸಿಸಿ. ನಂಬರ್ 16/2024**

ಫ್ರಾ.ಸಾಃ 5

ಚಾಸಾಃ4

**ದಿನಾಂಕಃ15.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

| | |
|---|---|
| ಹೆಸರು | : ಶ್ರೀ ನರಸಿಂಹಲು |
| ತಂದೆಯ ಹೆಸರು | : ಶಂಕರಪ್ಪ |
| ವಯಸ್ಸು | : 25 ವರ್ಷ |
| ಕೆಲಸ | : ಖಾಸಗೀ ಕೆಲಸ |
| ವಾಸ ಸ್ಥಳ | : ಜೆ ಆರ್ ಕೊತ್ತಪಲ್ಲಿ |

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ**

ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಚಾಸಾ 1 ಮತ್ತು 2 ರವರು ಗೊತ್ತಿಲ್ಲ. ನನ್ನ ಸಮಕ್ಷಮ ಮಹಜರ್ ಮಾಡಿಲ್ಲ ಮತ್ತು ಯಾವುದೇ ಸ್ವತ್ತನ್ನು ವಶಪಡಿಸಿಕೊಂಡಿಲ್ಲ. ಪೋಲೀಸರು ಒಂದು ದಾಖಲೆಗೆ ನನ್ನ ಸಹಿ ಪಡೆದಿರುತ್ತಾರೆ. ಯಾವ ವಿಚಾರಕ್ಕೆ ಎಂದು ಗೊತ್ತಿಲ್ಲ.ಆ ದಾಖಲೆಯಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಸಾಕ್ಷಿಗೆ ಮಹಜರ್ ಅನ್ನು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ2(ಸಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ. ಅ ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ**

ದಿಃ 04.01.2023 ರಂದು ಪೋಲೀಸರು ಅಪಘಾತ ಸ್ಥಳದಲ್ಲಿ ನನ್ನ ಮತ್ತು ಚಾಸಾ 5 ರವರ ಸಮಕ್ಷಮ ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ನಿಪಿ 2 ರಂತೆ ಬೆಳಿಗ್ಗೆ 9.00 ರಿಂದ 10.00 ರವರೆಗೆ ಮಹಜರ್ ಮಾಡಿ ಅಪಘಾತಕ್ಕೆ ಒಳಗಾದ ಎರಡು ವಾಹನಗಳನ್ನು

ಅಮಾನತ್ತುಪಡಿಸಿಕೊಂಡು ಸ್ಥಳದಲ್ಲಿ ನನ್ನ ಸಹಿ ಪಡದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ**

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸ. ಇದೆ

(ಶ್ರೀಮತಿ ರೋಹಿಣಿ. ಡಿ)
1 ನೇ ಅಪರ ಸಿ.ಜೆ ಮತ್ತು ಜೆಎಂಎಫ್ ಸಿ
ಮುಳಬಾಗಿಲು